**ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಔರಾದ(ಬಿ)**
**ಸಿ.ಸಿ. ನಂ. 334/2017**

**ಚಾಸಾ–5 ಪ್ರಾಸಾ–5**

ದಿನಾಂಕ **14–03–2023** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ಃ ಮೀನಾ ಪಾಟೀಲ |
| ಗಂಡನ ಹೆಸರು | ಃ ವಿಜಯಕುಮಾರ |
| ವಯಸ್ಸು | ಃ 55 ವರ್ಷ |
| ಉದ್ಯೋಗ | ಃ ಮನೆ ಕೆಲಸ |
| ವಾಸ ಸ್ಥಳ | ಃ ದಾಬಕಾ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ಚಾಸಾ–1 ನನ್ನ ಗಂಡ ಇರುತ್ತಾರೆ. ಆರೋಪಿತರ ಪರಿಚಯ ಇರುವುದಿಲ್ಲ. ದಾಬಕಾ ಶಿವಾರದಲ್ಲಿ ನನ್ನ ಹೆಸರಿನಲ್ಲಿ 2 ಎಕರೆ 2 ಗುಂಟೆ ಜಮೀನು ಸ.ನಂ.14 ರಲ್ಲಿರುತ್ತದೆ. ನನ್ನ ಜಮೀನಿನ ಹತ್ತಿರ ನಾಲೆ ಇರುತ್ತದೆ. ಈ ಪ್ರಕರಣದಲ್ಲಿ ಆರೋಪಿತರು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಘಟನೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ ಮತ್ತು ನಾನು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಗೆ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಬೇಕು ಎಂದು ಕೇಳಿಕೊಂಡಿದ್ದರಿಂದ ಅನುಮತಿಸಲಾಗಿದೆ.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ–**

1. ನಮ್ಮ ಜಮೀನಿನ ಪಕ್ಕದಲ್ಲಿರುವ ನಾಲಾದಿಂದ ನಾವು ನಮ್ಮ ಹೊಲಕ್ಕೆ ನೀರು ತೆಗೆದುಕೊಳ್ಳುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಲಾ ನಮ್ಮ ಹೊಲದ ಸರ್ವೆ ನಂಬರಿನಲ್ಲಿ ಬರುವುದಿಲ್ಲ, ಆದರೆ ನಮ್ಮ ಹೊಲದ ದಂಡೆಗೆ ಹತ್ತಿಕೊಂಡು ಇರುತ್ತದೆ ಎಂದರೆ ಸರಿಯಲ್ಲ. 2012 ನೇ ಸಾಲಿನಲ್ಲಿ ಗ್ರಾಮ ಪಂಚಾಯತ್ ನವರು ನಮ್ಮ ಹೊಲದಲ್ಲಿ ಬಾವಿ ತೆಗೆಸುತ್ತೇವೆ ಎಂದು 2011–12 ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ದಾಬಕಾ–ಸಿ

ಗ್ರಾಮ ಪಂಚಾಯತ್ ಅಡಿಯಲ್ಲಿ ಬರುವ ನಮ್ಮ ಹೊಲ ಸ.ನಂ.14 ರಲ್ಲಿ ದಂಡೆಗೆ ಹತ್ತಿರ ನಾಲಾದಲ್ಲಿ ತೆರೆದ ಬಾವಿ ತೆಗೆಯಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಹೊಲದಲ್ಲಿ ಅಗೆಯದೇ ಸರಿಯಾಗಿ ಕಾಮಗಾರಿ ಮಾಡದೇ ನಾಲಾದಲ್ಲಿ ತೆಗ್ಗು ತೆಗೆಸಿ ಅಂದಾಜು ರೂ.1,21,910/– ಗಳನ್ನು 1 ರಿಂದ 4 ನೇ ಆರೋಪಿತರು ತಮ್ಮ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ಹಾಗೂ ನನಗೆ ಮೋಸ ವಂಚನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಹೇಳಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. (ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ–7 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಈಗ ಆರೋಪಿತರಿಗೆ ಅನುಕೂಲವಾಗಲಿ ಎಂದು ಅವರ ಜೊತೆ ರಾಜಿ ಆಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ. ಬಿ. ಸಿ. ಕೆ. ವಕೀಲರಿಂದಃ–**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ಸಾಕ್ಷಿಯು ಮರಾಠಿಯಲ್ಲಿ ಹೇಳಿದ್ದನ್ನು ಅದನ್ನು ಯಥಾವತ್ತಾಗಿ ಕನ್ನದಲ್ಲಿ ಅನುವಾದಿಸಿ ನನ್ನ ಉಕ್ತಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಗ್ಣಕೀಕೃತಗೊಳಿಸಲಾಯಿತು)

ಓ. ಹೆ. ಕೆ. ಸರಿ ಇದೆ.

ಪ್ರ:ದ:ನ್ಯಾ:ದಂ.ಗಳು, ಔರಾ ದ್.